## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರು ರವರ ನಿಯಮ-72 ಅಡಿಯ ಸೂಚನೆಗೆ ಉತ್ತರ

**ವಿಷಯ:**

ಅಫಜಲ್‌ಪುರ ತಾಲ್ಲೂಕು ಚಿಣಮಗೇರಿ ಪ್ರಾಥಮಿಕ ಶಾಲೆಯಲ್ಲಿ ಬಿಸಿ ಊಟದಲ್ಲಿ ಬಿದ್ದು 8 ವರ್ಷದ ಬಾಲಕಿ ದಿನಾಂಕ: 19.11.2023 ರಂದು ನಿಧನರಾದ ಹೃದಯ ವಿದ್ರಾವಕ ಘಟನೆ ಹಾಗೂ ಮುಂದಿನ ಜೀವನದ ಆಸರೆಯಾಗಿ ಕುಟುಂಬವನ್ನು ಸಂರಕ್ಷಿಸುವ ಮೊದಲೇ ಈ ಬಾಲಕಿಯ ದುರಂತದ ಆಕಸ್ಮಿಕ ಘಟನೆಯಿಂದ ಮೀನುಗಾರರ ಈ ಕುಟಂಬಕ್ಕೆ ತುಂಬಲಾರದ ನಷ್ಟವಾಗಿದ್ದು ಕನಿಷ್ಠ ರೂ. 10.00 ಲಕ್ಷ ಪರಿಹಾರ ಈ ಕುಟುಂಬಕ್ಕೆ ಒದಗಿಸುವ ಬಗ್ಗೆ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸವಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:**

ಅಫಜಲ್‌ಪುರ ತಾಲ್ಲೂಕು ಚಿಣಮಗೇರಿ ಪ್ರಾಥಮಿಕ ಶಾಲೆಯಲ್ಲಿ ಬಿಸಿಯೂಟದಲ್ಲಿ ಬಿದ್ದು 8 ವರ್ಷದ ಬಾಲಕಿ ದಿನಾಂಕ:16.11.2023 ರಂದು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಫಲಕಾರಿಯಾಗದೇ ದಿನಾಂಕ:19.11.2023 ರಂದು ನಿಧನರಾಗಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ.

ಬಾಲಕಿಯ ಕುಟುಂಬಕ್ಕೆ ಈ ಕೆಳಕಂಡ ಪರಿಹಾರ ಒದಗಿಸಲಾಗಿದೆ:

- ಸರ್ಕಾರದಿಂದ ಮಗುವಿನ ಕುಟುಂಬಕ್ಕೆ ವಿದ್ಯಾರ್ಥಿ ಕಲ್ಯಾಣನಿಧಿ ವತಿಯಿಂದ ರೂ.1.25 ಲಕ್ಷಗಳ ಪರಿಹಾರ ಒದಗಿಸಲಾಗಿದೆ.
- ಮಗುವಿನ ಕುಟುಂಬಕ್ಕೆ ಜೀವನ ನಿರ್ವಹಣೆ ಸಂಬಂಧ ಮಗುವಿನ ತಾಯಿಗೆ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ವಸತಿ ನಿಲಯದಲ್ಲಿ ರಾತ್ರಿ ಕಾವಲುಗಾರರ ಹುದ್ದೆ ನೀಡಲಾಗಿದೆ.
- ಕರ್ನಾಟಕ ಸರ್ಕಾರದ ವಸತಿ ಯೋಜನೆಯಡಿ ಮನೆ ನಿರ್ಮಾಣಕ್ಕಾಗಿ ಮಂಜೂರಾತಿ ನೀಡಲಾಗಿದೆ.

ಮೃತ ಬಾಲಕಿಯ ಕುಟುಂಬ ನಿರ್ವಹಣೆಗಾಗಿ ಸರ್ಕಾರದ ವತಿಯಿಂದ ಅಗತ್ಯ ಕ್ರಮವನ್ನು ಈಗಾಗಲೇ ಕೈಗೊಳ್ಳಲಾಗಿದೆ.

**ಇಪಿ 50 ಎಂಎಂಎಸ್ 2023**

**(ಎಸ್.ಮಧು ಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ**
**ಸಚಿವರು.**